3528 (4281) – ಶ್ರೀ ಬಾಲ್‌ರಾಜ್ .ಎಸ್ (ಕೊಳ್ಳೇಗಾಲ)– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವರೆ?

ಅ) ಎನ್.ಜಿ.ಇ.ಎಫ್. ಬಡಾವಣೆಯ ವಾರ್ಡ್ ನಂ.84ರ ಸದಾನಂದ ನಗರದ ನಿವಾಸಿಗಳಿಗೆ ಬೆಂಗಳೂರು ನೀರುಸರಬರಾಜು ಮಂಡಳಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಸದರಿ ನಿವಾಸಿಗಳಿಗೆ ನೀರು ಸರಬರಾಜು ಸಂಪರ್ಕ ಕಲ್ಪಿಸಿದ್ದಾಗ್ಯೂ ನೀರು ಸರಬರಾಜು ಮಾಡದೇ ಇರಲು ಕಾರಣವೇನು;

ಆ) ಸದರಿ ಅಧಿಕಾರಿಯವರು ನಿವಾಸಿಗಳಿಗೆ ಬೇಜವಾಬ್ದಾರಿಯಿಂದ ವರ್ತಿಸುತ್ತಿರುವುದರಿಂದ ನಿವಾಸಿಗಳು ಕುಡಿಯುವ ನೀರಿನ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಇಂತಹ ಅಧಿಕಾರಿಯ ಮೇಲೆ ಶಿಸ್ತಿನ ಕ್ರಮ ಕೈಗೊಂಡು ಸದರಿ ನಿವಾಸಿಗಳ ವಸತಿಗಳಿಗೆ ನೀರು ಸರಬರಾಜು ಮಾಡಲು ಕ್ರಮಕೈಗೊಳ್ಳಲಾಗುವುದೇ ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) –

ಅ) ಎನ್.ಜಿ.ಇ.ಎಫ್. ಬಡಾವಣೆಯ ಸದಾನಂದನಗರ 84 ರ ವಿಭಾಗದಲ್ಲಿ ತೃಪ್ತಿಕರವಾಗಿ ನೀರು ಸರಬರಾಜು ಮಾಡಲಾತುತ್ತಿದೆ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರು ಸದರಿ ಬಡಾವಣೆಗೆ ನೀರು ಸರಬರಾಜು ಮಾಡಲು ನಿರಾಕರಿಸಿರುವುದಿಲ್ಲ.

ಆ) ಇಲ್ಲ.

ಇ) ಯಾವುದೇ ದೂರು ಬಂದಿರುವುದಿಲ್ಲ.

3529 (4283) ಶ್ರೀ ಬಾಲ್‌ರಾಜ್ .ಎಸ್ (ಕೊಳ್ಳೇಗಾಲ) – ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬೆಂಗಳೂರು ಗ್ರಾಮಾಂತರ ವಿಭಾಗೀಯ ನಿಯಂತ್ರಣಾಧಿಕಾರಿಯವರು ಸದರಿ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಅವಧಿ ಎಷ್ಟು;

ಆ) ಸದರಿ ಅಧಿಕಾರಿಯವರು ಕಛೇರಿಯ ಅವಧಿಯಲ್ಲಿ ಕೆಲಸ ನಿರ್ವಹಿಸದೇ ದಿನ ನಿತ್ಯ ಸಂಜೆ 6 ಗಂಟೆ 7 ಗಂಟೆಗಳಿಗೆ ಕಛೇರಿಗೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಅಧಿಕಾರಿಯು ಸಂಜೆ 6 ಗಂಟೆಗೆ ಕಛೇರಿಗೆ ಬಂದು ಸಿಬ್ಬಂದಿಯವರನ್ನು ಕಛೇರಿ ಅವಧಿ ಮುಗಿದಿದ್ದರೂ ಕಛೇರಿಯಿಂದ ಹೋಗದೇ ದಿನ ನಿತ್ಯ 10–11 ಗಂಟೆಯವರೆಗೆ ನಿರ್ಬಂಧಿಸಲು ಕಾನೂನಿನಲ್ಲಿ ಅವಕಾಶವಿದೆಯೇ;

ಈ) ಇವರ ಅಡಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಅವಾಚ್ಯ ಶಬ್ದಗಳಿಂದ ಬೈಯುವುದು ಹಾಗೂ ಕಿರುಕುಳ ಕೊಡುತ್ತಿರುವುದರ ಬಗ್ಗೆ ಮೇಲಾಧಿಕಾರಿಗಳಿಗೆ ಸಾಕಷ್ಟು ಬಾರಿ ಸಿಬ್ಬಂದಿಯವರು ದೂರು ನೀಡಿದ್ದಾಗ್ಯೂ ಇದುವರೆಗೂ ಇವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳದಿರಲು ಕಾರಣಗಳೇನು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)–

ಅ) ದಿನಾಂಕ: 24.08.2004 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಆ) ಬಂದಿಲ್ಲ.

ಇ) ಅವಕಾಶವಿಲ್ಲ.

ಈ) ಯಾವುದೇ ದೂರು ಬಂದಿರುವುದಿಲ್ಲ.

3530 (4331) (ಕಾಲಾವಕಾಶ ತೆಗೆದುಕೊಂಡ ಪ್ರಶ್ನೆ) – ಶ್ರೀ ಬಸಣ್ಣೆಪ್ಪ ಜಿ. ಎಂ.ಎಲ್.ಎ (ಹೊಳೆಹೊಮ್ಮರಾ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2000–2005 ನೇ ಸಾಲಿನಲ್ಲಿ ಬೆಂಗಳೂರು ನಗರದಲ್ಲಿ ಬಿದ್ದಿರುವ ಮಳೆ ಪ್ರಮಾಣದ ಸರಾಸರಿ ಎಷ್ಟು ?

ಆ) ಮಳೆಗಾಲದಲ್ಲಿ ನಗರದಲ್ಲಿರುವ ಕೆಳ ಹಂತದ ಬಡಾವಣೆಗಳಲ್ಲಿ ನೀರು ಪ್ರವಾಹದ ಹಾಗೆ ಬಂದಿರುವುದು ನಿಜವೇ ?

ಇ) ಹಾಗಿದ್ದಲ್ಲಿ, ಯಾವ ಯಾವ ಬಡಾವಣೆಗಳಲ್ಲಿ ನೀರು ನಿಂತಿರುವ ಪ್ರಸಂಗಗಳು ಎದುರಾಗಿರುತ್ತವೆ ;

ಈ) ಇದರಿಂದಾಗಿ ಜೀವ ಹಾಗೂ ಆಸ್ತಿ ಹಾನಿ ಅಂದಾಜು ವಿವರಗಳನ್ನು ನೀಡುವುದು?